ಕವಿಯಿಂದ ಸಾಧ್ಯವಾಗಿದೆ. ಆದರೆ, ವ್ಯೋಮಮೂರ್ತಿ ಅಲ್ಲಮ ಕಲ್ಯಾಣದ ಬಸವ ನಿರ್ಮಿತ ಶೂನ್ಯ ಸಿಂಹಾಸನದೆಡೆಗೆ ಬರುವುದಾದರೂ ಯಾವ ರೂಪದಲ್ಲಿ? ಪರಂಪರಾನುಗತವಾಗಿ ಬಂದ ಹತ್ತಾರು ಧರ್ಮ ಬೋಧಕರ ರೂಪಾಗಿ ಬರುವನೇ ಅಂದರೆ ಲೋಕ ಕಲ್ಯಾಣ ರೂಪಿ ಅಲ್ಲಮ ಸಮಾಜದ ಕಟ್ಟಕಡೆಯವನ ವೇಷದಲ್ಲಿ ಆಗಮಿಸುತ್ತಾನೆ. ಚಾಮರಸ ಆ ಚಹರೆಯನ್ನು ಸ್ವಲ್ಪ ಸಡಿಲದಲ್ಲಿ ಹೇಳಿದರೆ ಜನಪದರು ಎಷ್ಟು ಸಾಧ್ಯವೋ ಅಷ್ಟು ರೂಕ್ಷ ರೂಪಕ್ಕೆ ಕೊಂಡೊಯ್ಯುತ್ತಾರೆ. ಕಾರಣವನ್ನೇನು ಊಹಿಸಬೇಕಿಲ್ಲ. ಎಲ್ಲ ಶತಮಾನಗಳಲ್ಲಿ ಎಲ್ಲರೂ ಕಂಡ ಆದರೆ ಗಮನಕ್ಕೆ ಬಾರದೇ ಹೋದ ರೋಗ ಸಂಕಷ್ಟಗಳ ಗೂಡಾಗಿ ಅಲ್ಲಮ ಎದ್ದು ಬರುತ್ತಾನೆ, ಅದೂ ಹರಳಯ್ಯನ ಹಿತ್ತಲ ತಿಪ್ಪೆಯಿಂದ!

ಚಾಮರಸನ ಕೃತಿಯಲ್ಲಿ ಅಲ್ಲಮ ಕಲ್ಯಾಣದ ಬೀದಿಯಲ್ಲಿ ಬರುವ ರೂಪಿನ ವಿವರ ಹೀಗಿದೆ–

ಬಿಟ್ಟ ಮಂಡೆಯ ಕೆಂಚುಗೂದಲ
ನಿಟ್ಟೊಡಲ ನಿಡುದೋಳ ತೊನಹಿನ
ಮುಟ್ಟದೆವೆಗಳ ನಟ್ಟ ನೋಟದ ಲಂಬ ಕರ್ಣಗಳ ।
ದಟ್ಟಡಿಯ ಮಲೆಯಂಗದೊಲಹಿನ
ಕಟ್ಟಳೆಯ ಕಡು ಮರುಳು ವೇಷವ
ತೊಟ್ಟು ತೊಟ್ಟನೆ ಸುಳಿದನಾ ಪ್ರಭುಲಿಂಗಲೀಲೆಯಲಿ ॥

ಉಱುಗು ಟೊಂಕದ ಕುಂಟುಗಾಲಿನ
ಬೆಱತ ಬಿಂಕದ ಮೈಯ್ಯ ಬಿಗುಹಿನ
ತಱಿದ ಬಾಸುಳ ಬರಿಯ ಮುಸುಱಿನ ನೊಣದ ಹುಣ್ಣುಗಳ ।
ಕಿಱುನಗೆಯ ಕಟವಾಯ ಜೋಱಿನ
ಕುಱುಹನಡಗಿಸಿಕೊಂಡು ಹಸ್ತದ
ನಿಱಿಗೆಯಲಿ ನೆಱೆ ಸುಳಿದನಾ ಪ್ರಭುಲಿಂಗ ಲೀಲೆಯಲಿ ॥

ಹರಿಹರನ ರಗಳೆಯ ಕಥಾನಕಗಳಲ್ಲೆಲ್ಲ ದೈವದ ಆಗಮನವು ಅರಿಯದಂತಿದ್ದು ಅಥವಾ ಸಮೂಹದ ಕಟ್ಟಕಡೆಯವರ ಪ್ರತಿನಿಧಿಯಂತಿದ್ದು, ಇದು ಜನಪದ ಜಗತ್ತಿನಲ್ಲಿ ಇನ್ನಷ್ಟು ನೈಜ ಸ್ವರೂಪ ಪಡೆದುಕೊಳ್ಳುತ್ತದೆ. ಜನಪದ ಜಗತ್ತಿನಲ್ಲಿ ಅಲ್ಲಮನ ಶಕ್ತಿಯೇ ಆದ ಮಂಟೇಸ್ವಾಮಿ ಕಲ್ಯಾಣದ ಅನುಭವ ಮಂಟಪಕ್ಕೆ ಬರಲು ಬಾಗಿಲು ಕಾಯುವ ಸಂಗಯ್ಯನಿಂದ ತಳ್ಳಲ್ಪಡುತ್ತಾನೆ. ಹೀಗೆ ತಳ್ಳಿಸಿಕೊಂಡವನು ಬಿದ್ದದ್ದು ತಳಬೀದಿಯ ಮಾದಿಗರ ಹರಳಯ್ಯನ ತಿಪ್ಪೆಯಲ್ಲಿ. (ಇಲ್ಲಿ ಒಬ್ಬೊಬ್ಬ ಹಾಡುಗಾರರ ಗುಂಪಿನದು ಒಂದೊಂದು ಪಾಠಾಂತರ ಪ್ರಸಂಗವಿರುತ್ತದೆ). ಅಲ್ಲಮ ತಳ್ಳಿಸಿಕೊಂಡದ್ದಕ್ಕೆ ಕಾರಣ ಅವನ ಜರಾಜೀರ್ಣವೇಷ. ಹೆಗಲಲ್ಲಿ ಹೊತ್ತ ಸತ್ತ ಎಮ್ಮೆಯ ಕರು, ಕೈಯ್ಯಲ್ಲಿ ಹೆಂಡದ ಗಡಿಗೆ ಮತ್ತು ದೇಹವೆಲ್ಲವೂ ವ್ರಣಮಯ. ಇಂಥ ಸಂಕಷ್ಟ ಮತ್ತು ರೋಗ ಸಂಕೇತ ವ್ಯಕ್ತಿಯು ತಳ್ಳಲ್ಪಟ್ಟು, ಕಡೆಗೆ ಅರಿವಿನರಮನೆಯಲ್ಲಿ ಎಲ್ಲರಿಗಿಂತ 'ಕಿರಿಯನಾದ' ಆದರೆ ಲೋಕವನ್ನರಿತ ಜ್ಞಾನಿ ಬಸವಣ್ಣನು ತಿಪ್ಪೆಯಿಂದ ತಾನು ಎಲ್ಲರಿಗಿಂತ 'ಹಿರಿಯನಾಗಿ' ಅಲ್ಲಮನನ್ನು ಹೊತ್ತು ತಂದು ಅನುಭವ ಮಂಟಪದ ಎಲ್ಲ ಶರಣರ ನಿಂದೆಗೂ ಒಳಗಾಗುತ್ತಾನೆ. ಬಸವಣ್ಣನು ತನ್ನ ಕಾಲಾನಂತರ ಲೀಲಾ ಪುರುಷನಾಗಿರಬಹುದು. ಆದರೆ, ಅವನು ಬದುಕಿದ್ದ ಕಾಲಕ್ಕೆ ಯಾವ ಬಗೆಯ ಸಿಂಹಾಸನದಲ್ಲಿ ಯಾರನ್ನು ಆಯ್ಕೆ ಮಾಡಿ ತಂದು ಇರಿಸಬೇಕೆಂಬ ಸಾರ್ವಕಾಲಿಕ ಅನನ್ಯ